55. ಅರ್ರಹ್ಮಾನ್

ಸೂ. 78 ರು. 3

سُورَةُ الرَّحْمٰنِ مَدَنِيَّةٌ — اٰيَاتُهَا ٧٨ — رُكُوعَاتُهَا ٣

(ಅವತೀರ್ಣ - ಮದೀನಾದಲ್ಲಿ)

ಪರಮ ದಯಾಮಯನೂ ಕರುಣಾನಿಧಿಯೂ ಆದ ಅಲ್ಲಾಹನ ನಾಮದಿಂದ

بِسْمِ اللّٰهِ الرَّحْمٰنِ الرَّحِيْمِ

1. ರಹ್ಮಾನನು (ಪರಮ ದಯಾಮಯನು)-

اَلرَّحْمٰنُ ①

2. ಈ ಕುರ್‌ಆನನ್ನು ಕಲಿಸಿರುವನು.

عَلَّمَ الْقُرْاٰنَ ②

3. ಅವನೇ ಮಾನವನನ್ನು ಸೃಷ್ಟಿಸಿದನು-

خَلَقَ الْاِنْسَانَ ③

4. ಮತ್ತು ಅವನಿಗೆ ಮಾತಾಡಲು ಕಲಿಸಿದನು-

عَلَّمَهُ الْبَيَانَ ④

5. ಸೂರ್ಯ ಚಂದ್ರರು ಒಂದು ಗಣನೆಗೆ ಅಧೀನರಾಗಿದ್ದಾರೆ-

اَلشَّمْسُ وَالْقَمَرُ بِحُسْبَانٍ ⑤

6. ಮತ್ತು ಎಲ್ಲ ನಕ್ಷತ್ರಗಳೂ ವೃಕ್ಷಗಳೂ ಸಾಷ್ಟಾಂಗವೆರಗುತ್ತಿವೆ.[1]

وَّالنَّجْمُ وَالشَّجَرُ يَسْجُدٰنِ ⑥

7. ಆಕಾಶವನ್ನು ಅವನು ಉನ್ನತಗೊಳಿಸಿದನು ಮತ್ತು ತಕ್ಕಡಿ ಸ್ಥಾಪಿಸಿದನು.[2]

وَالسَّمَآءَ رَفَعَهَا وَوَضَعَ الْمِيْزَانَ ⑦

8. ಆದುದರಿಂದ ನೀವು ಸಮತೋಲನವನ್ನು ಕೆಡಿಸಬೇಡಿ.

اَلَّا تَطْغَوْا فِى الْمِيْزَانِ ⑧

9. ನ್ಯಾಯದೊಂದಿಗೆ ಸರಿಯಾಗಿ ತೂಗಿರಿ ಮತ್ತು ತೂಕದಲ್ಲಿ ಕಡಿತ ಮಾಡಬೇಡಿರಿ.[3]

وَاَقِيْمُوا الْوَزْنَ بِالْقِسْطِ وَلَا تُخْسِرُوا الْمِيْزَانَ ⑨

---

1. ಅರ್ಥಾತ್- ಆಜ್ಞಾನುಸಾರಿಗಳಾಗಿವೆ. ಅಲ್ಲಾಹನ ಆಜ್ಞೆಯಿಂದ ಅವು ಕೂದಲೆಳೆಯಷ್ಟು ಕದಲಲಾರವು.
2. ಬಹುತೇಕ ಎಲ್ಲ ವ್ಯಾಖ್ಯಾನಕಾರರೂ 'ಮೀಝಾನ್'(ತಕ್ಕಡಿ)ನ ಅರ್ಥ ನ್ಯಾಯವೆಂದಿದ್ದಾರೆ. 'ಮೀಝಾನನ್ನು ಸಂಸ್ಥಾಪಿಸುವುದು' ಎಂಬುದಕ್ಕೆ ಅವರು ಅಲ್ಲಾಹನು ನಿಸರ್ಗದ ಸಮಸ್ತ ವ್ಯವಸ್ಥೆಯನ್ನು ನ್ಯಾಯದೊಂದಿಗೆ ಸಂಸ್ಥಾಪಿಸಿದ್ದಾನೆ ಎಂಬ ಅರ್ಥ ನೀಡಿದ್ದಾರೆ.
3. ಅರ್ಥಾತ್- ಸಮಸ್ತ ವ್ಯವಸ್ಥೆ ನ್ಯಾಯದೊಂದಿಗೆ ಸಂಸ್ಥಾಪನೆಗೊಂಡಿರುವ ಸಂತುಲಿತ ನಿಸರ್ಗದಲ್ಲಿ ನೀವಿರುವುದರಿಂದ ನೀವೂ ನ್ಯಾಯದಲ್ಲಿ ನೆಲೆಗೊಳ್ಳಬೇಕು. ಯಾವ ಕ್ಷೇತ್ರದಲ್ಲಿ ನಿಮಗೆ ಸ್ವಾತಂತ್ರ್ಯ ನೀಡಲಾಗಿದೆಯೋ ಅದರಲ್ಲಿ ನೀವು ನ್ಯಾಯದೊಂದಿಗೆ ವರ್ತಿಸದಿದ್ದರೆ ನಿಸರ್ಗದ ಪ್ರವೃತ್ತಿಯೊಂದಿಗೆ ಬಂಡಾಯ ತೋರಿದಂತಾಗುತ್ತದೆ.

10. ಅವನು ಭೂಮಿಯನ್ನು ಸಕಲ ಸೃಷ್ಟಿಗಳಿಗಾಗಿ ಉಂಟು ಮಾಡಿದನು-	وَالْأَرْضَ وَضَعَهَا لِلْأَنَامِ ﴿١٠﴾
11. ಅದರಲ್ಲಿ ತರತರದ ಅನೇಕ ರುಚಿಕರವಾದ ಫಲಗಳಿವೆ, ಖರ್ಜೂರದ ಮರಗಳಿವೆ, ಅವುಗಳ ಫಲಗಳು ಹೊದಿಕೆಗಳಲ್ಲಿ ಸುತ್ತಿಕೊಂಡಿವೆ.	فِيهَا فَاكِهَةٌ وَالنَّخْلُ ذَاتُ الْأَكْمَامِ ﴿١١﴾
12. ತರತರದ ಧಾನ್ಯಗಳಿವೆ. ಅವುಗಳಲ್ಲಿ ಹೊಟ್ಟೂ ಇದೆ ಕಾಳೂ ಇದೆ.	وَالْحَبُّ ذُو الْعَصْفِ وَالرَّيْحَانُ ﴿١٢﴾
13. ಯಕ್ಷಗಳೇ ಮತ್ತು ಮಾನವರೇ, ನೀವಿನ್ನು ನಿಮ್ಮ ಪ್ರಭುವಿನ ಯಾವ ಯಾವ ಅನುಗ್ರಹಗಳನ್ನು[4] ಸುಳ್ಳಾಗಿಸುವಿರಿ?	فَبِأَيِّ آلَاءِ رَبِّكُمَا تُكَذِّبَانِ ﴿١٣﴾
14. ಅವನು ಮಾನವನನ್ನು ಓಡಿನಂತಹ ಹಳಸಿದ ಒಣ ಗಾರೆಯಿಂದ ಉಂಟು ಮಾಡಿದನು-	خَلَقَ الْإِنسَانَ مِن صَلْصَالٍ كَالْفَخَّارِ ﴿١٤﴾
15. ಮತ್ತು ಯಕ್ಷಗಳನ್ನು ಅಗ್ನಿಯ ಜ್ವಾಲೆಯಿಂದ ಸೃಷ್ಟಿಸಿದನು.	وَخَلَقَ الْجَانَّ مِن مَّارِجٍ مِّن نَّارٍ ﴿١٥﴾
16. ಯಕ್ಷಗಳೇ ಮತ್ತು ಮಾನವರೇ, ನೀವಿನ್ನು ನಿಮ್ಮ ಪ್ರಭುವಿನ ಯಾವ ಯಾವ ಅದ್ಭುತ ಮಹಿಮೆಗಳನ್ನು ಸುಳ್ಳಾಗಿಸುವಿರಿ?	فَبِأَيِّ آلَاءِ رَبِّكُمَا تُكَذِّبَانِ ﴿١٦﴾
17. ಎರಡು ಪೂರ್ವಗಳ ಮತ್ತು ಎರಡು ಪಶ್ಚಿಮಗಳ[5] ಪಾಲಕ ಪ್ರಭು ಅವನೇ ಆಗಿರುತ್ತಾನೆ.	رَبُّ الْمَشْرِقَيْنِ وَرَبُّ الْمَغْرِبَيْنِ ﴿١٧﴾
18. ಯಕ್ಷಗಳೇ ಮತ್ತು ಮಾನವರೇ, ನೀವಿನ್ನು ನಿಮ್ಮ ಪ್ರಭುವಿನ ಯಾವ ಯಾವ ಸಾಮರ್ಥ್ಯಗಳನ್ನು ಸುಳ್ಳಾಗಿಸುವಿರಿ?	فَبِأَيِّ آلَاءِ رَبِّكُمَا تُكَذِّبَانِ ﴿١٨﴾
19. ಅವನು ಎರಡು ಸಮುದ್ರಗಳನ್ನು ಪರಸ್ಪರ ಒಟ್ಟು ಸೇರಲು ಬಿಟ್ಟನು-	مَرَجَ الْبَحْرَيْنِ يَلْتَقِيَانِ ﴿١٩﴾
20. ಆದರೂ ಅವುಗಳ ನಡುವೆ ಒಂದು ಪರದೆ ಅಡ್ಡವಾಗಿದ್ದು ಅದನ್ನು ಅವು ಮೀರುವುದಿಲ್ಲ.	بَيْنَهُمَا بَرْزَخٌ لَّا يَبْغِيَانِ ﴿٢٠﴾

4. ಮೂಲದಲ್ಲಿ 'ಆಲಾಅ್' ಎಂಬ ಪದ ಪ್ರಯೋಗವಾಗಿದೆ. ಮುಂದಿನ ಸೂಕ್ತಗಳಲ್ಲಿ ಅದನ್ನು ಅನೇಕ ಬಾರಿ ಪುನರಾವರ್ತಿಸಲಾಗಿದೆ. ಬೇರೆ ಬೇರೆ ಕಡೆಗಳಲ್ಲಿ ನಾವು ಅದನ್ನು ವಿಭಿನ್ನ ಪದಗಳ ಮೂಲಕ ವಿವರಿಸಿದ್ದೇವೆ. ಅದರ ಅರ್ಥ ಅನುಗ್ರಹಗಳೆಂದಾಗಬಹುದು, ನಿಸರ್ಗದ ಚಮತ್ಕಾರಗಳೆಂದಾಗಬಹುದು ಅಥವಾ ಸ್ತುತ್ಯಗುಣಗಳೆಂದೂ ಆಗಬಹುದು. ಹಿನ್ನೆಲೆಗೆ ಅನುಗುಣವಾಗಿ ಪ್ರತಿಯೊಂದು ಸಂದರ್ಭದಲ್ಲೂ ಅದಕ್ಕೆ ಆಯಾ ಅರ್ಥವನ್ನು ಕಲ್ಪಿಸಲಾಗುವುದು.

5. ಎರಡು ಪೂರ್ವ ಮತ್ತು ಎರಡು ಪಶ್ಚಿಮಗಳೆಂದರೆ ಚಳಿಗಾಲದ ಅತ್ಯಂತ ಕನಿಷ್ಠ ಅವಧಿಯ ಹಗಲು ಮತ್ತು ಬೇಸಿಗೆಯ ಅತ್ಯಂತ ಗರಿಷ್ಠ ಅವಧಿಯ ಹಗಲಿನ ಪೂರ್ವ-ಪಶ್ಚಿಮಗಳು ಎಂದೂ ಆಗಬಹುದು. ಹಾಗೆಯೇ ಭೂಮಂಡಲದ ಅರ್ಧಗೋಳದ ಪೂರ್ವ-ಪಶ್ಚಿಮಗಳು ಎಂದೂ ಆಗಬಹುದು.

21. ಯಕ್ಷಗಳೇ ಮತ್ತು ಮಾನವರೇ, ನೀವಿನ್ನು ನಿಮ್ಮ ಪ್ರಭುವಿನ ಮಹಿಮೆಯ ಯಾವ ಯಾವ ಪವಾಡಗಳನ್ನು ಸುಳ್ಳಾಗಿಸುವಿರಿ?

فَبِأَيِّ آلَاءِ رَبِّكُمَا تُكَذِّبَانِ ﴿٢١﴾

22. ಈ ಸಮುದ್ರಗಳಿಂದ ಮುತ್ತು ಮತ್ತು ಹವಳಗಳು ಲಭಿಸುತ್ತವೆ.

يَخْرُجُ مِنْهُمَا اللُّؤْلُؤُ وَالْمَرْجَانُ ﴿٢٢﴾

23. ಯಕ್ಷಗಳೇ ಮತ್ತು ಮಾನವರೇ, ನೀವಿನ್ನು ನಿಮ್ಮ ಪ್ರಭುವಿನ ಯಾವ ಯಾವ ಚಮತ್ಕಾರಗಳನ್ನು ಸುಳ್ಳಾಗಿಸುವಿರಿ?

فَبِأَيِّ آلَاءِ رَبِّكُمَا تُكَذِّبَانِ ﴿٢٣﴾

24. ಸಮುದ್ರದಲ್ಲಿ ಪರ್ವತದಂತೆ ಮೇಲೆದ್ದಿರುವ ಹಡಗುಗಳು ಅವನದೇ ಆಗಿವೆ.

وَلَهُ الْجَوَارِ الْمُنْشَآتُ فِي الْبَحْرِ كَالْأَعْلَامِ ﴿٢٤﴾

25. ಯಕ್ಷಗಳೇ ಮತ್ತು ಮಾನವರೇ, ನೀವಿನ್ನು ನಿಮ್ಮ ಪ್ರಭುವಿನ ಯಾವ ಯಾವ ಉಪಕಾರಗಳನ್ನು ಸುಳ್ಳಾಗಿಸುವಿರಿ?

فَبِأَيِّ آلَاءِ رَبِّكُمَا تُكَذِّبَانِ ﴿٢٥﴾

26. ಈ ಭೂಮಿಯಲ್ಲಿರುವ ಪ್ರತಿಯೊಂದು ವಸ್ತುವೂ ನಾಶವಾಗಲಿದೆ-

كُلُّ مَنْ عَلَيْهَا فَانٍ ﴿٢٦﴾

27. ಮತ್ತು ನಿನ್ನ ಪ್ರಭುವಿನ ತೇಜೋಮಯ ಹಾಗೂ ಔದಾರ್ಯ ಪೂರ್ಣ ಅಸ್ತಿತ್ವ ಮಾತ್ರ ಉಳಿಯಲಿದೆ.

وَيَبْقَىٰ وَجْهُ رَبِّكَ ذُو الْجَلَالِ وَالْإِكْرَامِ ﴿٢٧﴾

28. ಯಕ್ಷಗಳೇ ಮತ್ತು ಮಾನವರೇ, ನೀವಿನ್ನು ನಿಮ್ಮ ಪ್ರಭುವಿನ ಯಾವ ಯಾವ ಚಮತ್ಕಾರಗಳನ್ನು ಸುಳ್ಳಾಗಿಸುವಿರಿ?

فَبِأَيِّ آلَاءِ رَبِّكُمَا تُكَذِّبَانِ ﴿٢٨﴾

29. ಭೂಮಿ-ಆಕಾಶಗಳಲ್ಲಿ ಇರುವವರೆಲ್ಲರೂ ತಮ್ಮ ಬೇಡಿಕೆಗಳನ್ನು ಅವನಿಂದಲೇ ಬೇಡುತ್ತಾರೆ. ಪ್ರತಿದಿನವೂ ಅವನು ವಿನೂತನ ವೈಭವದಲ್ಲಿರುತ್ತಾನೆ.[6]

يَسْأَلُهُ مَنْ فِي السَّمَاوَاتِ وَالْأَرْضِ ۚ كُلَّ يَوْمٍ هُوَ فِي شَأْنٍ ﴿٢٩﴾

30. ಯಕ್ಷಗಳೇ ಮತ್ತು ಮಾನವರೇ, ನೀವಿನ್ನು ನಿಮ್ಮ ಪ್ರಭುವಿನ ಯಾವ ಯಾವ ಸ್ತುತ್ಯ ಗುಣಗಳನ್ನು ಸುಳ್ಳಾಗಿಸುವಿರಿ?

فَبِأَيِّ آلَاءِ رَبِّكُمَا تُكَذِّبَانِ ﴿٣٠﴾

31. ಓ ಭೂಭಾರಗಳೇ![7] ಸದ್ಯದಲ್ಲೇ ನಾವು ನಿಮ್ಮ ವಿಚಾರಣೆ ನಡೆಸಲಿಕ್ಕಾಗಿ ಬಿಡುವು ಮಾಡಿಕೊಳ್ಳಲಿದ್ದೇವೆ.[8]

سَنَفْرُغُ لَكُمْ أَيُّهَ الثَّقَلَانِ ﴿٣١﴾

النصف

---

6. ಅರ್ಥಾತ್- ಈ ವಿಶ್ವವ್ಯವಸ್ಥೆಯಲ್ಲಿ ಅವನ ಚಟುವಟಿಕೆಗಳು ಎಡೆಬಿಡದೆ ಜಾರಿಯಲ್ಲಿವೆ. ಹೊಸ ರೂಪ, ವಿನ್ಯಾಸ ಮತ್ತು ವೈಶಿಷ್ಟ್ಯಗಳೊಂದಿಗೆ ಅಸಂಖ್ಯ ವಸ್ತುಗಳನ್ನು ಅವನು ಪ್ರತಿಕ್ಷಣವೂ ಸೃಷ್ಟಿಸುತ್ತಿದ್ದಾನೆ. ಅವನ ವಿಶ್ವ ಎಂದೂ ಒಂದೇ ಸ್ಥಿತಿಯಲ್ಲಿರುವುದಿಲ್ಲ. ಪ್ರತಿಕ್ಷಣವೂ ಅದರ ಪರಿಸ್ಥಿತಿ ಬದಲಾಗುತ್ತಿರುತ್ತದೆ. ಅದರ ಸೃಷ್ಟಿಕರ್ತ ಪ್ರತಿಬಾರಿಯೂ ಅದನ್ನು ಹಿಂದಿನೆಲ್ಲಾ ವಿನ್ಯಾಸಗಳಿಗಿಂತ ಭಿನ್ನವಾದ ಹೊಸ ರೂಪದೊಂದಿಗೆ ವ್ಯವಸ್ಥೆಗೊಳಿಸುತ್ತಾನೆ.

7. ಮೂಲದಲ್ಲಿ 'ಸಕಲಾನ್' ಎಂಬ ಪದ ಪ್ರಯೋಗವಾಗಿದೆ. 'ಸಕಲ್' ಎಂದು ವಾಹನದ ಮೇಲೆ ಹೊರಿಸಲಾದ ಭಾರಕ್ಕೆ ಹೇಳುತ್ತಾರೆ. 'ಸಕಲಾನ್'ನ ಶಬ್ದಾರ್ಥ 'ಹೇರಲ್ಪಟ್ಟ ಎರಡು ಹೊರೆಗಳು' ಎಂದಾಗುತ್ತದೆ. ಇಲ್ಲಿ ಈ ಪದವನ್ನು ಮಾನವರು ಮತ್ತು ಜಿನ್ನ್‌ಗಳಿಗೆ ಪ್ರಯೋಗಿಸಲಾಗಿದೆ. ಏಕೆಂದರೆ ಇವೆರಡೂ ವರ್ಗಗಳು ಭೂಮಿಯ ಮೇಲೆ ಹೇರಲ್ಪಟ್ಟಿವೆ. ಇಲ್ಲಿ ತಮ್ಮ ಪ್ರಭುವಿನ ಅನುಸರಣೆ ಮತ್ತು ದಾಸ್ಯದಿಂದ ವಿಮುಖರಾದ

32. ನಿಮ್ಮ ಪ್ರಭುವಿನ ಯಾವ ಯಾವ ಉಪಕಾರಗಳನ್ನು ನೀವು ಸುಳ್ಳಾಗಿಸುವಿರಿ.

فَبِأَيِّ آلَاءِ رَبِّكُمَا تُكَذِّبَانِ ٣٢

33. (ಎಂದು ಆಗ ನೋಡಿಕೊಳ್ಳುವೆವು). ಯಕ್ಷ ಮತ್ತು ಮಾನವ ವರ್ಗದವರೇ, ನೀವು ಭೂಮಿ-ಆಕಾಶಗಳ ಸರಹದ್ದುಗಳಿಂದ ಹೊರಗೆ ಓಡಿ ಹೋಗಬಲ್ಲಿರಾದರೆ ಓಡಿ ನೋಡಿರಿ, ನೀವು ಓಡಲಾರಿರಿ, ಅದಕ್ಕೆ ಪ್ರಚಂಡ ಶಕ್ತಿ ಬೇಕು.[9]

يَا مَعْشَرَ الْجِنِّ وَالْإِنسِ إِنِ اسْتَطَعْتُمْ
أَن تَنفُذُوا مِنْ أَقْطَارِ السَّمَاوَاتِ
وَالْأَرْضِ فَانفُذُوا ۚ لَا تَنفُذُونَ
إِلَّا بِسُلْطَانٍ ٣٣

34. ನಿಮ್ಮ ಪ್ರಭುವಿನ ಯಾವ ಯಾವ ಸಾಮರ್ಥ್ಯಗಳನ್ನು ನೀವು ಸುಳ್ಳಾಗಿಸುವಿರಿ?

فَبِأَيِّ آلَاءِ رَبِّكُمَا تُكَذِّبَانِ ٣٤

35. (ಓಡಿ ಹೋಗಲು ಪ್ರಯತ್ನಿಸಿದರೆ) ನಿಮ್ಮ ಮೇಲೆ ಬೆಂಕಿಯ ಜ್ವಾಲೆಯನ್ನೂ ಹೊಗೆಯನ್ನೂ ಬಿಡಲಾಗುವುದು. ನೀವು ಅದನ್ನು ಎದುರಿಸಲಾರಿರಿ.

يُرْسَلُ عَلَيْكُمَا شُوَاظٌ مِّن نَّارٍ
وَنُحَاسٌ فَلَا تَنتَصِرَانِ ٣٥

36. ಯಕ್ಷಗಳೇ ಮತ್ತು ಮಾನವರೇ, ನೀವು ನಿಮ್ಮ ಪ್ರಭುವಿನ ಯಾವ ಯಾವ ಮಹಿಮೆಗಳನ್ನು ನಿರಾಕರಿಸುವಿರಿ?

فَبِأَيِّ آلَاءِ رَبِّكُمَا تُكَذِّبَانِ ٣٦

37. ಆಕಾಶವು ಬಿರಿದಾಗ[10] ಮತ್ತು ಅದು ಕೆಂಪು ಚರ್ಮದಂತಾಗಿ ಮಾರ್ಪಟ್ಟಾಗ (ಅವಸ್ಥೆ ಏನಾದೀತು?)

فَإِذَا انشَقَّتِ السَّمَاءُ فَكَانَتْ
وَرْدَةً كَالدِّهَانِ ٣٧

38. ಯಕ್ಷಗಳೇ ಮತ್ತು ಮಾನವರೇ (ಆಗ) ನಿಮ್ಮ ಪ್ರಭುವಿನ ಯಾವ ಯಾವ ಮಹಿಮೆಗಳನ್ನು ನೀವು ಸುಳ್ಳಾಗಿಸುವಿರಿ?

فَبِأَيِّ آلَاءِ رَبِّكُمَا تُكَذِّبَانِ ٣٨

ಮಾನವರು ಮತ್ತು ಜಿನ್ನ್‌ಗಳನ್ನು ಸಂಬೋಧಿಸಲಾಗಿದೆ. ಆದ್ದರಿಂದ ಅವರನ್ನು, "ಓ ಭೂಮಿಗೆ ಹೊರೆಯಾಗಿರುವವರೇ" ಎಂದು ಸಂಬೋಧಿಸಲಾಗಿದೆ. ಈ ಮೂಲಕ ಸೃಷ್ಟಿಕರ್ತ ತನ್ನ ಸೃಷ್ಟಿಯ ಈ ಎರಡು ನಿರುಪಯುಕ್ತ ಗುಂಪುಗಳನ್ನುದ್ದೇಶಿಸಿ ಹೀಗೆನ್ನುತ್ತಿದ್ದಾನೆ, 'ನನ್ನ ಭೂಮಿಗೆ ಭಾರವಾಗಿರುವವರೇ! ಸದ್ಯವೇ ನಾನು ನಿಮ್ಮನ್ನು ವಿಚಾರಿಸಿಕೊಳ್ಳಲು ಬಿಡುವು ಮಾಡಿಕೊಳ್ಳಲಿದ್ದೇನೆ.'

8. ಈ ಆಜ್ಞೋಲ್ಲಂಘಕರನ್ನು ವಿಚಾರಣೆ ಮಾಡಲು ಸಮಯ ಸಿಗದಷ್ಟು ಅಲ್ಲಾಹನು ಕಾರ್ಯಮಗ್ನನಾಗಿದ್ದಾನೆ ಎಂದು ಇದರ ಅರ್ಥವಲ್ಲ. ಅಲ್ಲಾಹನು, ವಿಚಾರಣೆಗೆ ನಿರ್ದಿಷ್ಟ ವೇಳೆಯನ್ನು ನಿಶ್ಚಯಿಸಿದ್ದಾನೆ. ಅದರಂತೆ ಮಾನವರು ಮತ್ತು ಜಿನ್ನ್‌ಗಳ ಅಂತಿಮ ವಿಚಾರಣೆ ನಡೆಸುವ ಕಾಲ ಇನ್ನೂ ಆಸನ್ನವಾಗಿಲ್ಲ ಎಂದು ಇದರ ಅರ್ಥವಾಗಿದೆ.

9. ಭೂಮಿ-ಆಕಾಶಗಳೆಂದರೆ ನಿಸರ್ಗ ಅಥವಾ ಬೇರೆ ಪದಗಳಲ್ಲಿ ಹೇಳುವುದಾದರೆ ದೇವನ ದೇವತ್ವವಾಗಿದೆ. ದೇವನ ಹಿಡಿತದಿಂದ ಮುಕ್ತವಾಗುವುದು ನಿಮ್ಮಿಂದ ಸಾಧ್ಯವಿಲ್ಲವೆಂದು ಈ ಸೂಕ್ತದ ಅರ್ಥವಾಗಿದೆ. ಯಾವ ವಿಚಾರಣೆಯ ಬಗ್ಗೆ ನಿಮ್ಮ ಮುಂದೆ ಪ್ರಸ್ತಾವಿಸಲಾಗುತ್ತಿದೆಯೋ ಅದರ ಸಮಯ ಆಸನ್ನವಾದಾಗ ನೀವು ಯಾವ ಸ್ಥಳದಲ್ಲಿದ್ದರೂ ನಿಮ್ಮನ್ನು ಹಿಡಿಯಲಾಗುವುದು. ಅದರಿಂದ ಮುಕ್ತನಾಗಬೇಕಾದರೆ ನೀವು ದೇವನ ದೇವತ್ವದ ಸೀಮೆಯನ್ನು ಬಿಟ್ಟೋಡಬೇಕಾಗುವುದು. ಆದರೆ ಅದು ನಿಮ್ಮಿಂದ ಸಾಧ್ಯವಿಲ್ಲ. ಅಂತಹ ದುರಹಂಕಾರ ನಿಮ್ಮ ಮನಸ್ಸಿನಲ್ಲಿದ್ದರೆ ನಿಮ್ಮ ಸಾಮರ್ಥ್ಯವನ್ನು ಮೆರೆದು ತೋರಿಸಿ.

10. ಆಕಾಶ ಬಿರಿಯುವುದೆಂದರೆ ನಭೋಮಂಡಲದ ಬಂಧನ ಕಡಿಯಲ್ಪಡುವುದು, ನಿಸರ್ಗ ವ್ಯವಸ್ಥೆ ಅಸ್ತವ್ಯಸ್ತಗೊಳ್ಳುವುದು ಮತ್ತು ಗ್ರಹ-ನಕ್ಷತ್ರಗಳು ಚದುರಿ ಹೋಗುವುದಾಗಿದೆ.

39. ಅಂದು ಯಾವ ಮಾನವನೊಂದಿಗೂ ಯಕ್ಷನೊಂದಿಗೂ ಅವನ ಪಾಪಗಳ ಕುರಿತು ಕೇಳುವ ಅಗತ್ಯ ಇರಲಾರದು.

فَيَوْمَئِذٍ لَّا يُسْـَٔلُ عَن ذَنۢبِهِۦٓ إِنسٌ وَلَا جَآنٌّ ﴿٣٩﴾

40. ಆಗ, ನೀವಿಬ್ಬರೂ ನಿಮ್ಮ ಪ್ರಭುವಿನ ಯಾವ ಯಾವ ಉಪಕಾರಗಳನ್ನು ನಿರಾಕರಿಸುತ್ತೀರಿ (ಎಂಬುದನ್ನು ನೋಡಿಕೊಳ್ಳಲಾಗುವುದು).

فَبِأَىِّ ءَالَآءِ رَبِّكُمَا تُكَذِّبَانِ ﴿٤٠﴾

41. ಅಪರಾಧಿಗಳು ಅಲ್ಲಿ ತಮ್ಮ ಮುಖ ಲಕ್ಷಣಗಳಿಂದಲೇ ಗುರುತಿಸಲ್ಪಡುವರು ಮತ್ತು ಅವರ ಜುಟ್ಟನ್ನೂ ಕಾಲುಗಳನ್ನೂ ಹಿಡಿದು ಅವರನ್ನು ಎಳೆಯಲಾಗುವುದು.

يُعْرَفُ ٱلْمُجْرِمُونَ بِسِيمَٰهُمْ فَيُؤْخَذُ بِٱلنَّوَٰصِى وَٱلْأَقْدَامِ ﴿٤١﴾

42. (ಆಗ) ನೀವು ನಿಮ್ಮ ಪ್ರಭುವಿನ ಯಾವ ಯಾವ ಶಕ್ತಿ ಸಾಮರ್ಥ್ಯಗಳನ್ನು ಸುಳ್ಳಾಗಿಸುವಿರಿ?

فَبِأَىِّ ءَالَآءِ رَبِّكُمَا تُكَذِّبَانِ ﴿٤٢﴾

43. ಅಪರಾಧಿಗಳು ಸುಳ್ಳೆಂದು ನಿರಾಕರಿಸುತ್ತಿದ್ದುದು ಇದೇ ನರಕವನ್ನು (ಎಂದು ಆಗ ಹೇಳಲಾಗುವುದು).

هَٰذِهِۦ جَهَنَّمُ ٱلَّتِى يُكَذِّبُ بِهَا ٱلْمُجْرِمُونَ ﴿٤٣﴾

44. ಅದೇ ನರಕ ಮತ್ತು ಕುದಿಯುತ್ತಿರುವ ನೀರಿನ ನಡುವೆ ಅವರು ಸುತ್ತುತ್ತಿರುವರು.

يَطُوفُونَ بَيْنَهَا وَبَيْنَ حَمِيمٍ ءَانٍ ﴿٤٤﴾

45. ನೀವಿನ್ನು ನಿಮ್ಮ ಪ್ರಭುವಿನ ಯಾವ ಯಾವ ಸಾಮರ್ಥ್ಯಗಳನ್ನು ಸುಳ್ಳಾಗಿಸುವಿರಿ?

فَبِأَىِّ ءَالَآءِ رَبِّكُمَا تُكَذِّبَانِ ﴿٤٥﴾

46. ತನ್ನ ಪ್ರಭುವಿನ ಸನ್ನಿಧಾನದಲ್ಲಿ ಹಾಜರಾಗುವ ಭಯವಿಟ್ಟುಕೊಂಡಿರುವ ಪ್ರತಿಯೊಬ್ಬನಿಗೆ[11] ಎರಡು ಸ್ವರ್ಗೋದ್ಯಾನಗಳಿವೆ.

وَلِمَنْ خَافَ مَقَامَ رَبِّهِۦ جَنَّتَانِ ﴿٤٦﴾

47. ನಿಮ್ಮ ಪ್ರಭುವಿನ ಯಾವ ಯಾವ ಪುರಸ್ಕಾರಗಳನ್ನು ನೀವು ಸುಳ್ಳಾಗಿಸುವಿರಿ?

فَبِأَىِّ ءَالَآءِ رَبِّكُمَا تُكَذِّبَانِ ﴿٤٧﴾

48. ಅವು ಹಚ್ಚ ಹಸುರಾದ ಕೊಂಬೆಗಳಿಂದ ತುಂಬಿರುವುವು.

ذَوَاتَآ أَفْنَانٍ ﴿٤٨﴾

49. ನಿಮ್ಮ ಪ್ರಭುವಿನ ಯಾವ ಯಾವ ಕೊಡುಗೆಗಳನ್ನು ನೀವು ಸುಳ್ಳಾಗಿಸುವಿರಿ?

فَبِأَىِّ ءَالَآءِ رَبِّكُمَا تُكَذِّبَانِ ﴿٤٩﴾

11. ಅರ್ಥಾತ್- ಲೋಕದಲ್ಲಿ ದೇವಭಯದೊಂದಿಗೆ ಮತ್ತು ಒಂದು ದಿನ ನಾನು ದೇವನ ಮುಂದೆ ಹಾಜರಾಗಿ ಲೆಕ್ಕ ಸಮರ್ಪಣೆ ಮಾಡಬೇಕಾಗಿದೆ ಎಂಬ ಭಾವದೊಂದಿಗೆ ಕಾರ್ಯವೆಸಗಿದವರಿಗೆ.

50. ಎರಡು ಉದ್ಯಾನಗಳಲ್ಲೂ ಎರಡು ಚಿಲುಮೆಗಳು ಹರಿಯುತ್ತಿರುವುವು.

فِيهِمَا عَيْنَانِ تَجْرِيَانِ ﴿٥٠﴾

51. ನಿಮ್ಮ ಪ್ರಭುವಿನ ಯಾವ ಯಾವ ಕೊಡುಗೆಗಳನ್ನು ನೀವು ಸುಳ್ಳಾಗಿಸುವಿರಿ?

فَبِأَيِّ آلَاءِ رَبِّكُمَا تُكَذِّبَانِ ﴿٥١﴾

52. ಅವೆರಡರಲ್ಲೂ ಪ್ರತಿಯೊಂದು ಫಲದ ಎರಡು ವರ್ಗಗಳಿರುವುವು.[12]

فِيهِمَا مِن كُلِّ فَاكِهَةٍ زَوْجَانِ ﴿٥٢﴾

53. ನಿಮ್ಮ ಪ್ರಭುವಿನ ಯಾವ ಯಾವ ಕೊಡುಗೆಗಳನ್ನು ನೀವು ಸುಳ್ಳಾಗಿಸುವಿರಿ?

فَبِأَيِّ آلَاءِ رَبِّكُمَا تُكَذِّبَانِ ﴿٥٣﴾

54. ಸ್ವರ್ಗದ ನಿವಾಸಿಗಳು ದಪ್ಪಗಿನ ರೇಶ್ಮೆಯ ಒಳ ಕವಚವಿರುವ ಹಾಸುಗಳ ಮೇಲೆ ದಿಂಬಿಗೊರಗಿ ಕುಳಿತಿರುವರು ಮತ್ತು ಉದ್ಯಾನದ ಗೆಲ್ಲುಗಳು ಫಲ ಭಾರದಿಂದ ಬಾಗುತ್ತಿರುವುವು.

مُتَّكِئِينَ عَلَىٰ فُرُشٍ بَطَائِنُهَا مِنْ إِسْتَبْرَقٍ ۚ وَجَنَى الْجَنَّتَيْنِ دَانٍ ﴿٥٤﴾

55. ನಿಮ್ಮ ಪ್ರಭುವಿನ ಯಾವ ಯಾವ ಕೊಡುಗೆಗಳನ್ನು ನೀವು ಸುಳ್ಳಾಗಿಸುವಿರಿ?

فَبِأَيِّ آلَاءِ رَبِّكُمَا تُكَذِّبَانِ ﴿٥٥﴾

56. ಈ ಅನುಗ್ರಹಗಳ ಮಧ್ಯೆ-ಈ ಸ್ವರ್ಗ ನಿವಾಸಿಗಳಿಗಿಂತ ಮುಂಚೆ ಯಾವ ಮಾನವನಾಗಲಿ, ಯಕ್ಷ ಆಗಲಿ ಎಂದೂ ಸ್ಪರ್ಶಿಸಿರದಂತಹ[13] ಲಜ್ಜಾಪೂರ್ಣ ನಯನೆಯರಿರುವರು.[14]

فِيهِنَّ قَاصِرَاتُ الطَّرْفِ لَمْ يَطْمِثْهُنَّ إِنسٌ قَبْلَهُمْ وَلَا جَانٌّ ﴿٥٦﴾

12. ಇದರ ಒಂದರ್ಥ - ಎರಡೂ ತೋಟಗಳ ಫಲಗಳು ವಿಶಿಷ್ಟ ಬಗೆಯದಾಗಿರುವುದು. ಒಂದು ತೋಟದಲ್ಲಿ ತನ್ನದೇ ಆದ ವೈಶಿಷ್ಟ್ಯಗಳುಳ್ಳ ಫಲಗಳು ರೆಂಬೆಯಲ್ಲಿ ಜೋತು ಬಿದ್ದಿದ್ದರೆ ಮತ್ತೊಂದು ತೋಟದಲ್ಲಿ ಬೇರೆಯೇ ವೈಶಿಷ್ಟ್ಯತೆಗಳನ್ನು ಹೊಂದಿರುವ ಫಲಗಳಿರುವುವು ಎಂದಾಗಬಹುದು. ಇನ್ನೊಂದರ್ಥ - ಆ ತೋಟದಲ್ಲಿರುವ ಒಂದು ವಿಧದ ಹಣ್ಣುಗಳು ಚಿರಪರಿಚಿತವಾಗಿರುವುವು. ಲೋಕದಲ್ಲೂ ಅವನು ಅದನ್ನು ಅರಿತಿದ್ದನು. ರುಚಿಯಲ್ಲಿ ಅದು ಲೋಕದ ಹಣ್ಣುಗಳಿಗಿಂತ ಎಷ್ಟೇ ಉತ್ತಮವಾಗಿದ್ದರೂ ಸರಿ. ಇನ್ನೊಂದು ವಿಧದ ಹಣ್ಣುಗಳು ಲೋಕದಲ್ಲೆಂದೂ ಯಾರೂ ಕನಸು-ಮನಸಿನಲ್ಲೂ ಕಲ್ಪಿಸಿರದ ಅಪೂರ್ವ ಫಲಗಳಾಗಿರುವುವು ಎಂದಾಗಬಹುದು.

13. ಸಚ್ಚರಿತ ಮನುಷ್ಯರಂತೆ ಸಚ್ಚರಿತ ಜಿನ್ನ್‌ಗಳೂ ಸ್ವರ್ಗ ಪ್ರವೇಶಿಸುವರೆಂದು ಇದರಿಂದ ತಿಳಿದು ಬರುತ್ತದೆ. ಅಲ್ಲಿ ಮಾನವರಿಗೆ ಮಾನವ ಸ್ತ್ರೀಯರಿದ್ದರೆ ಜಿನ್ನ್‌ಗಳಿಗೆ ಜಿನ್ನ್ ಸ್ತ್ರೀಯರಿರುವರು. ದೇವನ ಲೀಲೆಯಿಂದ ಅವರನ್ನೆಲ್ಲಾ ಕನ್ಯೆಯರನ್ನಾಗಿ ಮಾಡಲಾಗುವುದು.

14. ಇದು ಮಹಿಳೆಯ ನೈಜ ವಿಶೇಷತೆಯಾಗಿದೆ. ಆಕೆ ನಿರ್ಲಜ್ಜೆ ಮತ್ತು ನಿರ್ಭಿಡೆಯ ಸ್ವಭಾವದ ಬದಲು ಲಜ್ಜಾಪೂರ್ವಕ ದೃಷ್ಟಿ ಹೊಂದಿರಬೇಕು. ಆದ್ದರಿಂದಲೇ ಅಲ್ಲಾಹನು ಸ್ವರ್ಗದ ಅನುಗ್ರಹಗಳ ನಡುವೆ ಸ್ತ್ರೀಯರ ಬಗ್ಗೆ ಪ್ರಸ್ತಾಪಿಸುತ್ತಾ ಅವರ ಸೌಂದರ್ಯವನ್ನಲ್ಲ ಬದಲಾಗಿ ಲಜ್ಜೆ ಮತ್ತು ಪಾವಿತ್ರ್ಯವನ್ನು ಶ್ಲಾಘಿಸಿದ್ದಾನೆ. ಸ್ತ್ರೀ-ಪುರುಷರ ಸಮ್ಮಿಶ್ರ ಕೂಟ ಮತ್ತು ಸಿನಿಮಾಲಯಗಳಲ್ಲೂ ಸುಂದರಿಯರಾದ ಸ್ತ್ರೀಯರೂ ಜಮಾಯಿಸುತ್ತಾರೆ. ಸೌಂದರ್ಯ ಸ್ಪರ್ಧೆಗಳಲ್ಲಂತೂ ಬಹಳ ಸೂಕ್ಷ್ಮವಾಗಿ ಆರಿಸಿ ಒಂದೊಂದೇ ಸುಂದರಿಯರನ್ನು ತರಲಾಗುತ್ತದೆ. ಆದರೆ ಕೀಳಭಿರುಚಿ ಮತ್ತು ಕೆಟ್ಟ ಪ್ರವೃತ್ತಿ ಇರುವ ಜನರು ಮಾತ್ರ ಅವರ ಬಗ್ಗೆ ಆಸಕ್ತಿ ಬೆಳೆಸಿಕೊಳ್ಳುತ್ತಾರೆ. ಕೆಟ್ಟ ದೃಷ್ಟಿ ಬೀರುವ ಪ್ರತಿಯೊಬ್ಬನ ದೃಷ್ಟಿಯನ್ನೂ ಸೆಳೆಯುವ ಮತ್ತು ಪ್ರತಿಯೊಬ್ಬನ ಬಾಹುಗಳಿಗೂ ಒಲಿಯಲು ಸಿದ್ಧವಿರುವ ಸೌಂದರ್ಯ ಯಾವ ಸಭ್ಯ ವ್ಯಕ್ತಿಯನ್ನೂ ತನ್ನತ್ತ ಸೆಳೆಯಲಾರದು.

57. ನಿಮ್ಮ ಪ್ರಭುವಿನ ಯಾವ ಯಾವ ಪುರಸ್ಕಾರಗಳನ್ನು ನೀವು ಸುಳ್ಳಾಗಿಸುವಿರಿ?

فَبِأَيِّ آلَاءِ رَبِّكُمَا تُكَذِّبَانِ ﴿٥٧﴾

58. ವಜ್ರ ಮತ್ತು ಮುತ್ತುಗಳಂತೆ ಸೌಂದರ್ಯವುಳ್ಳವರು.

كَأَنَّهُنَّ الْيَاقُوتُ وَالْمَرْجَانُ ﴿٥٨﴾

59. ನಿಮ್ಮ ಪ್ರಭುವಿನ ಯಾವ ಯಾವ ಕೊಡುಗೆಗಳನ್ನು ನೀವು ಸುಳ್ಳಾಗಿಸುವಿರಿ?

فَبِأَيِّ آلَاءِ رَبِّكُمَا تُكَذِّبَانِ ﴿٥٩﴾

60. ಒಳಿತಿನ ಪ್ರತಿಫಲ ಒಳಿತಲ್ಲದೆ ಇನ್ನೇನು?

هَلْ جَزَاءُ الْإِحْسَانِ إِلَّا الْإِحْسَانُ ﴿٦٠﴾

61. ಯಕ್ಷಗಳೇ ಮತ್ತು ಮಾನವರೇ, ನೀವಿನ್ನು ನಿಮ್ಮ ಪ್ರಭುವಿನ ಯಾವ ಯಾವ ಸ್ತುತ್ಯ ಗುಣಗಳನ್ನು ಸುಳ್ಳಾಗಿಸುವಿರಿ.

فَبِأَيِّ آلَاءِ رَبِّكُمَا تُكَذِّبَانِ ﴿٦١﴾

62. ಈ ಎರಡು ಉದ್ಯಾನಗಳಲ್ಲದೆ ಇನ್ನೂ ಎರಡು ಉದ್ಯಾನಗಳಿರುವುವು.[15]

وَمِنْ دُونِهِمَا جَنَّتَانِ ﴿٦٢﴾

63. ನಿಮ್ಮ ಪ್ರಭುವಿನ ಯಾವ ಯಾವ ಕೊಡುಗೆಗಳನ್ನು ನೀವು ಸುಳ್ಳಾಗಿಸುವಿರಿ?

فَبِأَيِّ آلَاءِ رَبِّكُمَا تُكَذِّبَانِ ﴿٦٣﴾

64. ದಟ್ಟವಾದ ಸಂಪನ್ನ ಹಸಿರು ಉದ್ಯಾನಗಳು.

مُدْهَامَّتَانِ ﴿٦٤﴾

65. ನಿಮ್ಮ ಪ್ರಭುವಿನ ಯಾವ ಯಾವ ಕೊಡುಗೆಗಳನ್ನು ನೀವು ಸುಳ್ಳಾಗಿಸುವಿರಿ?

فَبِأَيِّ آلَاءِ رَبِّكُمَا تُكَذِّبَانِ ﴿٦٥﴾

66. ಎರಡೂ ಉದ್ಯಾನಗಳಲ್ಲಿ ಎರಡು ಚಿಲುಮೆಗಳು ಕಾರಂಜಿಗಳಂತೆ ಉಕ್ಕುತ್ತಿರುವುವು.

فِيهِمَا عَيْنَانِ نَضَّاخَتَانِ ﴿٦٦﴾

67. ನಿಮ್ಮ ಪ್ರಭುವಿನ ಯಾವ ಯಾವ ಕೊಡುಗೆಗಳನ್ನು ನೀವು ಸುಳ್ಳಾಗಿಸುವಿರಿ?

فَبِأَيِّ آلَاءِ رَبِّكُمَا تُكَذِّبَانِ ﴿٦٧﴾

68. ಅವೆರಡರಲ್ಲೂ ಧಾರಾಳ ಫಲಗಳೂ ಖರ್ಜೂರಗಳೂ ದಾಳಿಂಬೆಗಳೂ ಇರುವುವು.

فِيهِمَا فَاكِهَةٌ وَنَخْلٌ وَرُمَّانٌ ﴿٦٨﴾

69. ನಿಮ್ಮ ಪ್ರಭುವಿನ ಯಾವ ಯಾವ ಕೊಡುಗೆಗಳನ್ನು ನೀವು ಸುಳ್ಳಾಗಿಸುವಿರಿ?

فَبِأَيِّ آلَاءِ رَبِّكُمَا تُكَذِّبَانِ ﴿٦٩﴾

15. ಪ್ರಾಯಶಃ ಎರಡು ಉದ್ಯಾನಗಳು ತಂಗಲಿಕ್ಕಾಗಿ, ಮತ್ತೆರಡು ಉದ್ಯಾನಗಳು ವಿಹಾರಕ್ಕಾಗಿ ಇರುವುವು.

70. ಈ ಅನುಗ್ರಹಗಳ ನಡುವೆ ಸುಶೀಲೆಯರೂ ಸುಂದರಿಯರೂ ಆದ ಪತ್ನಿಯರಿದ್ದಾರೆ.

فِيهِنَّ خَيْرَٰتٌ حِسَانٌ ۷۰

71. ನಿಮ್ಮ ಪ್ರಭುವಿನ ಯಾವ ಯಾವ ಕೊಡುಗೆಗಳನ್ನು ನೀವು ಸುಳ್ಳಾಗಿಸುವಿರಿ?

فَبِأَيِّ ءَالَآءِ رَبِّكُمَا تُكَذِّبَانِ ۷۱

72. ಡೇರೆಗಳಲ್ಲಿ ತಂಗಿಸಲಾಗಿರುವ ಅಪ್ಸರೆಯರಿರುವರು.[16]

حُورٌ مَّقْصُورَٰتٌ فِى ٱلْخِيَامِ ۷۲

73. ನಿಮ್ಮ ಪ್ರಭುವಿನ ಯಾವ ಯಾವ ಕೊಡುಗೆಗಳನ್ನು ನೀವು ಸುಳ್ಳಾಗಿಸುವಿರಿ?

فَبِأَيِّ ءَالَآءِ رَبِّكُمَا تُكَذِّبَانِ ۷۳

74. ಈ ಸ್ವರ್ಗವಾಸಿಗಳಿಗಿಂತ ಮುಂಚೆ ಯಾವ ಮಾನವನಾಗಲಿ, ಯಕ್ಷ ಆಗಲಿ ಅವರನ್ನು ಎಂದೂ ಸ್ಪರ್ಶಿಸಿರಲಾರರು.

لَمْ يَطْمِثْهُنَّ إِنسٌ قَبْلَهُمْ وَلَا جَآنٌّ ۷۴

75. ನಿಮ್ಮ ಪ್ರಭುವಿನ ಯಾವ ಯಾವ ಕೊಡುಗೆಗಳನ್ನು ನೀವು ಸುಳ್ಳಾಗಿಸುವಿರಿ?

فَبِأَيِّ ءَالَآءِ رَبِّكُمَا تُكَذِّبَانِ ۷۵

76. ಆ ಸ್ವರ್ಗವಾಸಿಗಳು ಹಸಿರು ರತ್ನಗಂಬಳಿಗಳ ಹಾಗೂ ನುಣುಪಾದ ಅಮೂಲ್ಯ ಹಾಸುಗಳ ಮೇಲೆ ದಿಂಬಿಗೊರಗಿ ಕುಳಿತಿರುವರು.

مُتَّكِـِٔينَ عَلَىٰ رَفْرَفٍ خُضْرٍ وَعَبْقَرِىٍّ حِسَانٍ ۷۶

77. ನಿಮ್ಮ ಪ್ರಭುವಿನ ಯಾವ ಯಾವ ಕೊಡುಗೆಗಳನ್ನು ನೀವು ಸುಳ್ಳಾಗಿಸುವಿರಿ?

فَبِأَيِّ ءَالَآءِ رَبِّكُمَا تُكَذِّبَانِ ۷۷

78. ತೇಜೋಮಯನೂ ಔದಾರ್ಯಪೂರ್ಣನೂ ಆಗಿರುವ ನಿನ್ನ ಪ್ರಭುವಿನ ನಾಮವು ಮಂಗಳಮಯವಾಗಿದೆ.

تَبَٰرَكَ ٱسْمُ رَبِّكَ ذِى ٱلْجَلَٰلِ وَٱلْإِكْرَامِ ۷۸

---

16. ಡೇರೆಗಳೆಂದರೆ ಪ್ರಾಯಶಃ ವಿಹಾರ ಸ್ಥಳದಲ್ಲಿ ನಾಯಕರಿಗೆ ಮತ್ತು ಶ್ರೀಮಂತರಿಗೆ ಹಾಕಲಾಗುವಂತಹ ಡೇರೆಗಳಾಗಿರಬಹುದು. ಆ ವಿಹಾರ ಸ್ಥಳದಲ್ಲಿ ಅಲ್ಲಲ್ಲಿ ಡೇರೆಗಳಿರುವುದು ಮತ್ತು ಹೂರ್‌ಗಳು (ನಾಕ ಕನ್ಯೆಯರು) ಅವರಿಗೆ ಸುಖ-ಸಂತೋಷದ ಸಾಧನಗಳನ್ನು ಒದಗಿಸುವರು.